ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಯೋಜನೆ ಪ್ರವಾಸೋದ್ಯಮ ಸಚಿವರು).—

ಅ) ಅಂದಾಜು ರೂ. ೧೬.೬೭ ಲಕ್ಷ.

ಆ) ಅಂದಾಜು ರೂ. ೧೦.೨೫ ಲಕ್ಷ

ಇ) ವಸತಿಗೃಹಗಳಿಂದ ಮತ್ತು ಹೋಟೆಲು ಉದ್ಯಮಂದಿಂದ ಒಟ್ಟು ರೂ. ೧೯೪.೬೫ ಲಕ್ಷಗಳಂ (ಅಂದಾಜು)

ಈ) ಅಂದಾಜು ರೂ. ೯೯.೫೧ ಲಕ್ಷ;

ಕಬಿನಿ ಡ್ಯಾಮ್ ಬಳಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರಂ ಕಾಟೇಜ್‌ಗಳನ್ನ್ ಕಟ್ಟುವ ಬಗ್ಗೆ,

೨೦೫ ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಯೋಜನೆ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಡ್ಯಾಮ್ ಬಳಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಕಾಟೇಜ್‌ಗಳನ್ನು ಕಟ್ಟುವ ಉದ್ದೇಶ ಹೊಂದಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳ ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು).

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಸಾವನದುರ್ಗವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಕುರಿತಂ.

೬೮೭ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಯೋಜನಾ, ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಮಾಗಡಿ ತಾಲ್ಲೂಕಿನಲ್ಲಿರುವ ಸಾವನದುರ್ಗ ಒಂದು ಅತ್ಯುತ್ತಮ ಪ್ರೇಕ್ಷಣೀಯ ಸ್ಥಳ ವೆಂಬುದು ಸರ್ಕಾರಕ್ಕೆ ತಿಳಿದಿದೆಯೆ?

೨) ಹಾಗಿದ್ದಲ್ಲಿ, ಸಾವನದುರ್ಗವನ್ನು ಪ್ರವಾಸಿಗರ ಸ್ಥಳವನ್ನಾಗಿ ಮಾಡಲು ಸರ್ಕಾರದವರಂ ಕ್ರಮ ತೆಗೆದುಕೊಳ್ಳುವರೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

೧) ತಿಳಿದಿದೆ.

೨) ಈ ಕ್ಷೇತ್ರವನ್ನು ಈಗಾಗಲೇ ಪ್ರವಾಸಿ ಸ್ಥಳವೆಂದು ಗುರುತಿಸ ಲಾಗಿದೆ ಮತ್ತು ಪ್ರವಾಸೋದ್ಯಮ ಇಲಾಖೆಯು ಹೊರ ತಂದಿರುವ 'ಬೆಂಗಳೂರಿನಸುತ್ತಮುತ್ತ' ಮಡಿಕೆಯಲ್ಲಿ ಈ ಸ್ಥಳವನ್ನು ಅಳವಡಿಸಿ ಪ್ರಚಾರ ಮಾಡಲಾಗಿದೆ.